CC 131/2015
CW-2 PW -1

## ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ. 131/2015

ದಿನಾಂಕಃ**.24.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**2** | ಪ್ರಾಸಾ-**1** |
|---|---|
| ಹೆಸರು | - ಕಾವೇರಪ್ಪ |
| ತಂದೆ / ಗಂಡನ ಹೆಸರು | - ಮೂಗಯ್ಯ |
| ವಯಸ್ಸು | - **53** |
| ಉದ್ಯೋಗ | - ಎ ಎಸ್ ಐ |
| ವಿಳಾಸ | - ಚನ್ನ ಪಟ್ಟಣ ಪೂರ್ವ ಪೊ.ಠಾಣೆ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

**2010-2015** ರವರೆಗೆ ನಾನು ಪೊಲೀಸ್ ಪೇದೆಯಾಗಿ ಸಾತನೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

**24.03.2014** ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಚಾಸಾ-**1** ರವರು ಫೋನ್ ಮಾಡಿ ಪಂಚರನ್ನು ಕರೆದುಕೊಂಡು ದೊಡ್ಡಾಲಹಳ್ಳಿ ಗ್ರಾಮಕ್ಕೆ ಬರಲು ತಿಳಿಸಿದ್ದು ನಂತರ ನಾನು , ಚಾಸಾ-**2** ಹಾಗೂ ಚಾಸ-**5** ರಿಂದ **7** ರವರನ್ನು ಕರೆದುಕೊಂಡು ದೊಡ್ಡಾಲಹಳ್ಳಿ ಗ್ರಾಮಕ್ಕೆ ಹೋದೆ. ನಂತರ ಚಾಸಾ-**1** ರವರು ನಮ್ಮನ್ನು ಕರೆದುಕೊಂಡು ಹೊಂಗಾಣಿ ದೊಡ್ಡಿ ಗ್ರಾಮಕ್ಕೆ ಕರೆದುಕೊಂಡು ಹೋಗಿ ನಮ್ಮೊಂದಿಗೆ ಆರೋಪಿ ಮನೆಯಲ್ಲಿರುವ ಅಂಗಡಿ ಮೇಲೆ ದಾಳಿ ಮಾಡಿದಾಗ ಅಂಗಡಿ ಒಳಗೆ **hey wards 180** ಎಂ ಎಲ್ **30** ಪಾಕೆಟ್ ಗಳು ಸಿಕ್ಕಿದು ಅವುಗಳನ್ನು ಪಂಚರ ಸಮಕ್ಷಮ ಸಂಜೆ **4.30-5.30** ಗಂಟೆ ವರೆಗೆ ಪಂಚನಾಮೆ ಮಾಡಿ ವಶ ಪಡಿಸಿಕೊಂಡೆವು.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ನಿಪಿ-**1** ಎಂದು ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

ವಶ ಪಡಿಸಿಕೊಂಡ ಮುದ್ದೆಮಾಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಾಯಾಲಯದ ಮುಂದೆ ಇರುವ ಒಂದು ಟೆಟ್ರಾ ಪಾಕೆಟ್ ನ್ನು ನೋಡಿ ಅದನ್ನು ಗುರುತಿಸಿದ್ದು ಅದನ್ನು ಎಂ.ಒ-**1** ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ, ಅವನು ಇಂದು ನ್ಯಾಯಾಲಯದಲ್ಲಿ ಹಾಜರಿದ್ದಾನೆ. ಘಟನೆ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾವು ಆರೋಪಿ ಅಂಗಡಿ ಮೇಲೆ ದಾಳಿ ಮಾಡಿದಾಗ ಆರೋಪಿ ಓಡಿ ಹೋದ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ. ಕೆಎಂಜಿ ವಕೀಲರಿಂದಃ</u>**

ಚಾಸಾ-1 ರವರು ಪಂಚರ ಮುಖಾಂತರ ನಿಪಿ-1 ನ್ನು ಬರೆಸಿದ್ದು ಆಗ ನಾನು ಹಾಜರಿದ್ದೆ. ಪಂಚರನ್ನು ದೊಡ್ಡಾಲಹಳ್ಳಿ ವೃತ್ತದಿಂದ ಕರೆದುಕೊಂಡು ಹೋದೆವು. ಪಂಚರಿಗೆ ಚಾಸಾ-1 ರವರು ನೋಟೀಸ್ ಕೊಟ್ಟಿದ್ದು ನನಗೆ ಗೊತ್ತಿಲ್ಲ. ನಾನು ಪಂಚರು ಮತ್ತು ಚಾಸಾ-1 ರವರು ಜೀಪಿನಲ್ಲಿ ಹೋದೆವು. ದಿಃ 24.03.2014 ರಂದು ಈ ಒಂದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ನಿರ್ವಹಿಸಿದ್ದೇನೆ. ಆರೋಪಿ ವಾಸದ ಮನೆ ಹತ್ತಿರ ಹೋದಾಗ ಸಮಯ ಸಂಜೆ 4.30. ನಾವು ಅಲ್ಲಿಗೆ ಹೋದಾಗ ಅಂಗಡಿಯಲ್ಲಿ ಒಬ್ಬರು ಇದ್ದರು. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಆರೋಪಿ ಬಗ್ಗೆ ಅಕ್ಕ ಪಕ್ಕದಲ್ಲಿ ವಿಚಾರಿಸಿದಾಗ ಅವರ ಹೆಸರು ಗೊತ್ತಾಯಿತು. ಎಂ.ಒ -1 ನ್ನು ಪೊಲೀಸ್ ಠಾಣೆಯಲ್ಲಿ ತಯಾರು ಮಾಡಿಕೊಂಡೆವು ಎಂದರೆ ಸರಿಯಲ್ಲ. ಎಂ.ಒ -1 ನ್ನು ಪೊಲೀಸ್ ಠಾಣೆಯಲ್ಲಿ

ಸೀಲ್ ಮಾಡಿದೆವು. ಅದನ್ನು ಸೀಲ್ ಮಾಡಿದಾಗ ಅಮಾನತ್ತು ಪಂಚನಾಮೆ ಬರೆದಿದ್ದೇವೆ. ಅಮಾನತ್ತು ಪಂಚನಾಮೆ ಮಾಡಿರುವುದಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-5 ಹೊಂಗಾಣಿ ದೊಡ್ಡಿಯವರು, ಚಾಸಾ-6 ಮತ್ತು 7 ರವರು ಯಾವ ಊರಿನವರು ಎಂದು ಗೊತ್ತಿಲ್ಲ.

ನಾನು ಯಾವುದೇ ದಾಳಿಯಲ್ಲಿ ಭಾಗವಹಿಸಿರುವುದಿಲ್ಲ ಪಂಚನಾಮೆಯಲ್ಲಿ ಭಾಗಿಯಾಗಿರುವುದಿಲ್ಲ ಆದರೂ ರಾಜಕಾರಣಿ ಮಾತು ಕೇಳಿ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**